# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 1523/2022

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತರು : 1. ದುರ್ಗಪ್ಪ ತಂದೆ ಮಾರುತಿ ಹೆಳವರ,
ವಯಸ್ಸು : 23 ವರ್ಷ, ವೃತ್ತಿ : ಗೌಂಡಿ ಕೆಲಸ,
ಸಾಃ ಹೊಸ ಹಗಡಲಿ, ತಾಃ ಹಳಿಯಾಳ, ಜಿಃಉ.ಕ.

2. ಸಮೀರವುಲ್ಲಾ ಅಲಿಯಾಸ ಸಮೀರ ತಂದೆ ಸೂಹೆಲ ಅಹ್ಮದ ಬೇಪಾರಿ,
ವಯಸ್ಸು : 22 ವರ್ಷ, ವೃತ್ತಿ : ಕೂಲಿ ಕೆಲಸ,
ಸಾಃ ಚವ್ಹಾಣ ಪ್ಲಾಟ್, ಹಳಿಯಾಳ, ಹಳಿಯಾಳ ಶಹರ,
ತಾಃ ಹಳಿಯಾಳ, ಜಿಃಉ.ಕ.

3. ಜುಬೇರಖಾನ ತಂದೆ ಆಲಂಖಾನ್ ಪಠಾಣ,
ವಯಸ್ಸು : 25 ವರ್ಷ, ವೃತ್ತಿ : ಚಾಲಕ ಕೆಲಸ,
ಸಾಃ ಅಕ್ಕಿ ಪೇಟೆ ಸಿದ್ದಾರೋಢ, ಹಳೇ ಹುಬ್ಬಳ್ಳಿ,
ತಾಃ ಹುಬ್ಬಳ್ಳಿ, ಜಿಃ ಧಾರವಾಡ.

4. ಕಿಶನ್ ತಂದೆ ಅನುರಾಜ ಗೊಂದಳಿ,
ವಯಸ್ಸು : 29 ವರ್ಷ, ವೃತ್ತಿ : ಚಾಲಕ ಕೆಲಸ,
ಸಾಃ ಅಕ್ಕಿ ಪೇಟೆ ಸಿದ್ದಾರೋಢ, ಹಳೇ ಹುಬ್ಬಳ್ಳಿ,
ತಾಃ ಚವ್ಹಾಣ್ ಪ್ಲಾಟ್, ಹಳಿಯಾಳ ಶಹರ, ತಾಃ ಹಳಿಯಾಳ,
ಜಿಃ ಉ.ಕ.

## ದೋಷಾರೋಪಣೆ

ನಾನು ಗೀತಾ., ಪ್ರ.ದ.ನ್ಯಾದಂ ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೋಷರೋಪಣೆ ಏನೆಂದರೆ.

1, 2 ಮತ್ತು 4 ನೇ ಆರೋಪಿತರಾದ ನೀವು ದಿನಾಂಕ 14-07-2022 ರಂದು ಸಾಯಂಕಾಲ 04-00 ರ ಸಮಯದಲ್ಲಿ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ ತಾಲೂಕಿನ ಚಿಬ್ಬಲಗೇರಿಗೆ ಹೋಗುವ ಅಲೋಳ್ಳಿ ಕ್ರಾಸ್ ಹತ್ತಿರ ರಸ್ತೆಯಿಂದ ಸುಮಾರು 500 ಮೀಟರ ಅಂತರದ ಕಾಲು ದಾರಿಯಲ್ಲಿ ಪಿರ್ಯಾದಿಯು ತಮ್ಮ ಸ್ಪೆಂಡ್ಲರ್ ಪ್ಲಸ್ ಮೋಟಾರ ಸೈಕಲ್ ನಂಬರ ಕೆಎ-31-ಎಸ್-9789 ನೇದ್ದನ್ನು ನಿಲ್ಲಿಸಿದ್ದರು, ನಿಮ್ಮ ಪೈಕಿ 1, 2 ಮತ್ತು 4 ನೇ ಆರೋಪಿತರಾದ ನೀವು ಪಿರ್ಯಾದಿಯ ಸ್ಪೆಂಡ್ಲರ್ ಪ್ಲಸ್ ಮೋಟಾರ ಸೈಕಲ್ ಅನ್ನು ಕಳುವು ಮಾಡುವ ಮೂಲಕ ನೀವು 1, 2 ಮತ್ತು 4 ನೇ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 379 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಎರಡನೇಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ 1, 2 ಮತ್ತು 4 ನೇ ಆರೋಪಿತರಾದ ನೀವು ಪಿರ್ಯಾದಿಯ ಸ್ಪೆಂಡ್ಲರ್ ಪ್ಲಸ್ ಮೋಟಾರ ಸೈಕಲ್ ನಂಬರ ಕೆಎ-31-ಎಸ್-9789 ನೇದ್ದನ್ನು ನೀವು ಕಳುವು ಮಾಡಿದ ವಾಹನ ಎಂದು ಗೊತ್ತಿದ್ದರೂ ಸಹ ಸಾಕ್ಷಿಯನ್ನು ಹಾಳು ಮಾಡುವ ಉದ್ದೇಶದಿಂದ ಅದರ ಬಿಡಿ ಬಾಗಗಳನ್ನು ಬಿಚ್ಚಿ ದಾರಿಯಲ್ಲಿ ಬರ ಹೋಗುವ ಗುಜರಿ ವ್ಯಾಪಾರಿಗಳಿಗೆ ಮಾರಾಟ ಮಾಡಿ ಹಾಗೂ ಸದರಿ ಮೋಟಾರ ಸೈಕಲನ ಟೂಲ್ ಬಾಕ್ಸ್ ನಲ್ಲಿದ್ದ ಮೋಟಾರ ಸೈಕಲನ ಝರಾಕ್ಸ್ ದಾಖಲೆಗಳನ್ನು ನಿಮ್ಮ ಮನೆಯಲ್ಲಿ ಇಟ್ಟುಕೊಂಡು ಅಪರಾಧದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸಾಕ್ಷ್ಯ ನಾಶಪಡಿಸುವ ಮೂಲಕ ನೀವು ಭಾ.ದಂ.ಸಂ. ಕಲಂ 201 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಕೊನೆಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ 1, 2 ಮತ್ತು 4 ನೇ ಆರೋಪಿತರಾದ ನೀವು ಪಿರ್ಯಾದಿಯ ಬಾಬ್ತು ಸ್ಪೆಂಡ್ಲರ್ ಪ್ಲಸ್ ಮೋಟಾರ ಸೈಕಲ್ ನಂಬರ ಕೆಎ-31-ಎಸ್-9789 ನೇದ್ದನ್ನು 3 ನೇ ಆರೋಪಿಗೆ ಮಾರಾಟ ಮಾಡಿದ್ದು, ಅದು ಕಳುವು ಮಾಡಿದ ವಾಹನ ಎಂದು ಗೊತ್ತಿದ್ದರೂ ಸಹ 3 ನೇ ಆರೋಪಿಯಾದ ನೀವು ಅಪ್ರಮಾಣಿಕವಾಗಿ ಸ್ವೀಕರಿಸುವ ಮೂಲಕ ಭಾ.ದಂ.ಸಂ. ಕಲಂ 411 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಆರೋಪಿ ಕ್ರ.1

ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು.

ಆರೋಪಿ ಕ್ರ.2

ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು

ಆರೋಪಿ ಕ್ರ.3

ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು

ಆರೋಪಿ ಕ್ರ.4

ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು

(ದೊಷಾರೋಪಣೆಯ ಸಾರಾಂಶವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ಸ್ಥಳ : ಹಳಿಯಾಳ.

ದಿನಾಂಕ : 08-01-2026. ಪ್ರ.ದ.ನ್ಯಾದಂ., ಹಳಿಯಾಳ.